O.S.No.188/2017
PW -4

ದಿನಾಂಕ 21/06/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಮುಖ್ಯ ವಿಚಾರಣೆ :- ಶ್ರೀ ಜಿ.ಬಿ.ಹೆಚ್. ವಾದಿ ಪರ ವಕೀಲರಿಂದ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲವೂ ಸತ್ಯವಾಗಿದೆ, ಹಾಗೂ ಸದರಿ ಪ್ರಮಾಣ ಪತ್ರಕ್ಕೆ ನಾನೇ ತಿಳಿದು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ- ಶ್ರೀ ಎಸ್.ಆರ್.ಆರ್. ಪ್ರತಿವಾದಿ ಪರ ವಕೀಲರಿಂದ.**

ನಾನು ಮೊದಲು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ಕೆಲಸ ಮಾಡುವ ಅವಧಿಯಲ್ಲಿ ಯಾವ ಯಾವ ಊರಿನಲ್ಲಿ ವಾಸ ಇದ್ದೆ ಎಂದರೆ ಸರಿ. ನಾನು ನಿವೃತ್ತಿ ಹೊಂದುವವರೆಗೂ ಚಿನಕವಜ್ರ ಗ್ರಾಮಕ್ಕೆ ಬಂದಿರಲಿಲ್ಲ ಎಂದರೆ ಸರಿ. ಈ ದಾವೆಯನ್ನು ಕೆಂಪಮ್ಮ ಇವರು ಶಿವಶಂಕರ್ ಇವರ ಮೇಲೆ ಹೂಡಿರುತ್ತಾರೆ. ದಾವಾ ಆಸ್ತಿ ಗಳು 3 ಇದ್ದು ಅವುಗಳ ಸರ್ವೆ ನಂ-16/13, 16/19 ಮತ್ತು 16/23 ಇರುತ್ತದೆ. ಸರ್ವೆ ನಂ-16/13 ಇದರ ವಿಸ್ತೀರ್ಣ 28 ಗುಂಟೆ ಇದ್ದು ಅದಕ್ಕೆ ಚಕ್ಕುಬಂದಿ ಪೂ-ಸಿದ್ದಪ್ಪ ರವರ ಜಮೀನು , ಪ-ಮೂರ್ಖಣಪ್ಪನ ಜಮೀನು , ಉ-ಬೆಟ್ಟ , ದ-ಹಳ್ಳ ಇರುತ್ತದೆ. ಪೂರ್ವಕ್ಕೆ ಇರುವ ಸಿದ್ದಪ್ಪ ರವರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ- 16/19 ರ ವಿಸ್ತೀರ್ಣ 1 ಎಕರೆ ಇದ್ದು ಅದಕ್ಕೆ ಚಕ್ಕುಬಂದಿ ಪೂ-ಹಳ್ಳ , ಪ-ಬೆಟ್ಟ , ಉ-ರಂಗಪ್ಪನ ಜಮೀನು ಮತ್ತು ದ-ಹಳ್ಳ ಇರುತ್ತದೆ. ರಂಗಪ್ಪನ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ- 16/23 ಇದರ ವಿಸ್ತೀರ್ಣ 3-4 ಗುಂಟೆ ಇದ್ದು ಅದಕ್ಕೆ ಚಕ್ಕುಬಂದಿ ಪೂ-ಮೂರ್ಖಣಪ್ಪನ ಜಮೀನು, ಪ-ಹಳ್ಳ, ಉ-ಹಳ್ಳ ಮತ್ತು ದ-ಮೂರ್ಖಣಪ್ಪ ರವರ ಜಮೀನು ಇರುತ್ತದೆ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಸೇರಿದ ಜಮೀನು ಇರುವುದಿಲ್ಲ ಎಂದರೆ ಸರಿ.

2. ನಾನು ದಾವಾ ಆಸ್ತಿಗಳ ಬಳಿ ಹೋಗುವ ಪ್ರಮೇಯ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ತಿಗಳಿಂದ ದಾವಾ ಆಸ್ತಿ ಅರ್ಧ ಪರ್ಲಾಂಗು ದೂರದಲ್ಲಿರುತ್ತವೆ. ಹೊಂಬಣ್ಣನನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅವರ ಹೆಂಡತಿ ಮತ್ತು ಮಕ್ಕಳನ್ನು ನೋಡಿರುತ್ತೇನೆ. ದಾವಾ ಆಸ್ತಿಗಳು ಲಕ್ಷ್ಮೀದೇವ್ಮಮ್ಮ ಇವರ ಆಸ್ತಿಗಳು ಎಂದರೆ ಸರಿ. ಲಕ್ಷ್ಮೀದೇವ್ಮಮ್ಮನ 2 ನೇ ಮಗಳು ಕೆಂಪಕ್ಕ ರವರನ್ನು ನಂಜಪ್ಪ ರವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆಂಪಕ್ಕ ರವರ ಗಂಡ ಮರಣಾ ನಂತರ ಲಕ್ಷ್ಮೀದೇವಮ್ಮ ಇವರ ಮನೆಯಲ್ಲಿ ವಾಸ ಇರುತ್ತಾರೆ. ಕೆಂಪಕ್ಕನಿಗೆ ಲಕ್ಷ್ಮೀದೇವ್ಮಮ್ಮ ಎಂಬ ಮಗಳು ಇದ್ದಳು ಎಂದರೆ ಸರಿ. ಸದರಿ ಲಕ್ಷ್ಮೀದೇವಮ್ಮ ನನ್ನು ಚನ್ನಪ್ಪ ಇವರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ಕೆಂಪಕ್ಕ ಜೀವಂತ ಇರುವವರೆಗೂ ಲಕ್ಷ್ಮೀದೇವ್ಮಮ್ಮ ಮತ್ತು ಚನ್ನಪ್ಪ ಒಂದೇ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿ.

3. ಕೆಂಪಕ್ಕ , ಲಕ್ಷ್ಮೀದೇವ್ಮಮ್ಮ ಮತ್ತು ಚನ್ನಪ್ಪ ಒಂದೆ ಮನೆಯಲ್ಲಿ ವಾಸ ಇದ್ದಾಗ ಚನ್ನಪ್ಪ ಉಳುಮೆ ಮಾಡುತ್ತಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ಲಕ್ಷ್ಮೀದೇವಮ್ಮ ಕೆಂಪಕ್ಕನಿಗೆ ವಿಲ್ ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಲಕ್ಷ್ಮೀದೇವಮ್ಮ ರವರು ಮರಣಾ ನಂತರ ದಾವಾ ಆಸ್ತಿಗಳನ್ನು ಚನ್ನಪ್ಪ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚನ್ನಪ್ಪ ತೀರಿಕೊಂಡ ನಂತರ ಅವರ ಮೊಮ್ಮಗ ಶಿವಶಂಕರ್ ಉಳುಮೆ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಯಾರು ಉಳುಮೆ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಕೆಂಪಕ್ಕ ತೀರಿಕೊಂಡ ಚನ್ನಪ್ಪ ರವರು ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ಕೆಂಪಕ್ಕ , ರಾಜು ಇವರು ಚಿನಕವಜ್ರಕ್ಕೆ ಬಂದು 6-7 ವರ್ಷ ಆಗಿರುತ್ತದೆ ಎಂದರೆ ಸಾಕ್ಷಿ ಮೊದಲು ಚಿನಕವಜ್ರದಲ್ಲಿ ವಾಸ ಇದ್ದು ನಂತರ ಬೆಂಗಳೂರಿಗೆ ಹೋಗಿ ಬಂದು ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ.

4. ಕೆಂಪಕ್ಕ ಮತ್ತು ಆಕೆಯ ಗಂಡ ಎಂದಿಗೂ ಚಿನಕವಜ್ರದಲ್ಲಿ ವಾಸ ಇರಲಿಲ್ಲ ಎಂದರೆ ಸಾಕ್ಷಿ ಇಲ್ಲಿಗೂ ಬಂದು ಹೋಗಿ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಕೆಂಪಕ್ಕ ಮತ್ತು ಅವರ ಗಂಡ ಬೆಂಗಳೂರಿನ ಚಿಕ್ಕಬಿದರುಕಲ್ಲಿನಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. 2015-16 ನೇ ಸಾಲಿನ ನಂತರ ಚಿನಕವಜ್ರಕ್ಕೆ ಬಂದು ಅಲ್ಲಿ ಆಧಾರ್ ಕಾರ್ಡ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ, ಕೆಂಪಕ್ಕನಿಗೂ, ರಾಜುವಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿ ಬಳಿ ಬಂದು ಬೆಳೆ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ